**10 ನೇ ತರಗತಿ -: 30 ದಿನಗಳ 'ಬಂಧ'**

**ವಿಷಯ: ಸಮಾಜ ವಿಜ್ಞಾನ**

| **ಅಪೇಕ್ಷಿತ  ಕಲಿಕಾ ಫಲಗಳು** | **ಕಲಿಕಾಂಶಗಳು** | **ಸಲಹಾತ್ಮಕ ಚಟುವಟಿಕೆಗಳು.** | **ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು.** |
|---|---|---|---|
| 1.ಕರ್ನಾಟಕದ ಪ್ರಮುಖ ವೈಶಿಷ್ಟ್ಯಗಳಾದ  ಪ್ರಾಕೃತಿಕ ವಿಭಾಗಗಳು, ಭೂಭಾಗಗಳು, ನದಿಗಳು, ಹವಾಮಾನ, ಜೀವ ವೈವಿಧ್ಯತೆಯ ವಿಧಗಳು ಮತ್ತು ವನ್ಯಜೀವಿಗಳ ಬಗ್ಗೆ ವಿವರಿಸುವರು.<br>**( ದಿನಗಳು-4)** | * ಪ್ರಾಕೃತಿಕ ವಿಭಾಗಗಳನ್ನು ಅರಿಯುವರು.<br>* ನದಿಗಳ ಬಗ್ಗೆ ತಿಳಿಯುವರು.<br>* ಜೀವ ವೈವಿದ್ಯತಾ ತಾಣಗಳ ಅರಿವು.<br>* ಕರ್ನಾಟಕದ ರಾಷ್ಟ್ರೀಯ ಉದ್ಯಾನವನಗಳನ್ನು ತಿಳಿಯುವರು. | 1.1 ನಕ್ಷೆ ರಚನೆ(ಕರ್ನಾಟಕ/ಭಾರತ)<br>1.2 ಪಟ್ಟಿ ರಚನೆ. (ಉದಾ:- ವಿದ್ಯಾರ್ಥಿಯ ಜಿಲ್ಲೆಯ ನದಿಗಳನ್ನು ಪಟ್ಟಿ ಮಾಡಿಸುವುದು.)<br>1.3 ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ' **ಒಂದು ರಾಜ್ಯ ಹಲವು**   **ಜಗತ್ತು** ' ಯೂಟ್ಯೂಬ್ ವಿಡಿಯೋ.<br>1.4 ವ್ಯಕ್ತಿ ಸಂದರ್ಶನ. | 1.3 **ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ' ಒಂದು ರಾಜ್ಯ ಹಲವು ಜಗತ್ತು ಯೂಟ್ಯೂಬ್ ವಿಡಿಯೋವನ್ನು** (https://youtu.be/yzMoVPw9oQo ) ತೋರಿಸುವಾಗ ಹೀಗೆ ಮಾಡಿ.<br>1. ಒಮ್ಮೆ ಸಂಪೂರ್ಣ ವಿಡಿಯೋವನ್ನು ಗಮನವಿಟ್ಟು ವೀಕ್ಷಿಸುವಂತೆ ಹೇಳಿರಿ.<br>2. ಎರಡನೇ ಬಾರಿಗೆ ವಿಡಿಯೋವನ್ನು ಅಲ್ಲಲ್ಲಿ ನಿಲ್ಲಿಸಿ ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿ ನೀಡಿ.<br>3. ವೀಡಿಯೋದಲ್ಲಿ ಗುರುತಿಸಿದ ಪ್ರಮುಖ ಅಂಶಗಳನ್ನು  ವಿದ್ಯಾರ್ಥಿಗಳಿಂದ ಮಾತನಾಡಿಸಿ.<br>**1.6 ಪಿರಮಿಡ್ ರಚಿಸೋಣ ;**<br>**ಸುಳುಹುಗಳು**<br>1. ಕರ್ನಾಟಕದ ಒಟ್ಟು ಪ್ರಾಕೃತಿಕ ವಿಭಾಗಗಳ ಸಂಖ್ಯೆ ಎಷ್ಟು?<br>2. ಶರಾವತಿ ನದಿಯಿಂದ ನಿರ್ಮಾಣವಾದ ಅತೀ ಎತ್ತರವಾದ ಜಲಪಾತ.<br>3. ಘಟಪ್ರಭಾ ನದಿಯ ಈ ಪ್ರಸಿದ್ಧ ಜಲಪಾತ ಉತ್ತರದ ಮೈದಾನದಲ್ಲಿದೆ..<br>4. ಏಷ್ಯಾದ ಅತೀ ಎತ್ತರವಾದ ಏಕಶಿಲಾ ಬೆಟ್ಟ.<br>3<br>ಜೋ ಗ<br>ಗೋ ಕಾ ಕ್<br>ಮ ದು ಗಿ ರಿ |

| | | | |
|---|---|---|---|
| | | 1.5 ಮಾದರಿ ತಯಾರಿಕೆ.<br>1.6 ಪಿರಾಮಿಡ್ ನ ರಚನೆ.<br>1.7 ರಂಗೋಲಿ ಸ್ಪರ್ಧೆ. (ಉದಾ:- ಪ್ರಾಕೃತಿಕ ವಿಭಾಗಗಳು) | |
| 2.ಪ್ರಾಕೃತಿಕ ವಿಕೋಪಗಳಿಗೆ ಕಾರಣವಾಗುವ ಅಂಶಗಳನ್ನು ತಿಳಿದು ನಿಯಂತ್ರಣಾ ವಿಧಾನಗಳನ್ನು ತಿಳಿಯುವರು.<br>**( ದಿನಗಳು-4)** | * ಪ್ರಾಕೃತಿಕ ವಿಕೋಪಗಳನ್ನು ಅರಿಯುವರು. (ಉದಾ:- ಭೂಕಂಪ)<br>* ಪ್ರಾಕೃತಿಕ ವಿಕೋಪಗಳಿಗೆ ಕಾರಣಗಳನ್ನು ತಿಳಿಯುವರು.<br>* ಪ್ರಾಕೃತಿಕ ವಿಕೋಪದ ಪರಿಣಾಮಗಳನ್ನು ವಿಶ್ಲೇಷಿಸುವರು.<br>* ಪರಿಹಾರ/ ನಿಯಂತ್ರಣಾ ಕ್ರಮಗಳ ಬಗ್ಗೆ ಸಲಹೆ ನೀಡುವರು. | 2.1 ಚರ್ಚಾ ಸ್ಪರ್ದೆ.<br>2.2 ವಿಡಿಯೋ ತುಣುಕಿನ ಪ್ರದರ್ಶನ:- **"ಟ್ವಿಸ್ಟರ್ ಸಿನೆಮಾ"** ವಿಡಿಯೋ ತುಣುಕು ವೀಕ್ಷಣೆ.<br>2.3 ಪಟ್ಟಿ ರಚನೆ – ಮಕ್ಕಳ ಪೂರ್ವ ಜ್ಞಾನದಿಂದ ಪ್ರಾಕೃತಿಕ ವಿಕೋಪಕ್ಕೆ ಕಾರಣವಾಗುವ ಅಂಶಗಳನ್ನು ಪಟ್ಟಿ ಮಾಡಿಸುವುದು. (ಉದಾ:-ಬೆಂಕಿಯಿಂದ ಕಾಡ್ಗಿಚ್ಚು)<br>2.4 ಚಿತ್ರಗಳ ಕೊಲೇಜ್ ರಚನೆ. | **2.1 ಚರ್ಚಾ ಸ್ಪರ್ಧೆ**:-ಹಂತ 1. ಒಟ್ಟು ವಿದ್ಯಾರ್ಥಿಗಳನ್ನು ಎರಡು ತಂಡಗಳಾಗಿ ರಚಿಸಿ. ಮಕ್ಕಳು ತಮಗೆ ಗೊತ್ತಿರುವ ಪ್ರಾಕೃತಿಕ ವಿಕೋಪಗಳನ್ನು ಹೆಸರಿಸುವಂತೆ ಪ್ರೇರೇಪಿಸಿ.<br>ಹಂತ 2:- **'ಪ್ರಾಕೃತಿಕ ವಿಕೋಪಗಳಿಗೆ ಪ್ರಾಕೃತಿಕ ಅಂಶಗಳಿಗಿಂತ ಮಾನವ ನಿರ್ಮಿತ ಅಂಶಗಳು ಹೆಚ್ಚು ಪ್ರಭಾವ ಬೀರುತ್ತವೆ'** ಎಂಬ ಚರ್ಚಾ ವಿಷಯಕ್ಕೆ ಒಂದು ತಂಡ ಪರವಾಗಿ, ಮತ್ತೊಂದು ತಂಡ ವಿರೋಧವಾಗಿರುವಂತೆ ಚರ್ಚೆ ಮಾಡಿಸಿ.<br>ಹಂತ 3 :- ಕೊನೆಯಲ್ಲಿ ಒಂದು ತಂಡ ಪರಿಣಾಮಗಳ ಬಗ್ಗೆ ವಿವರಿಸಿದರೆ, ಮತ್ತೊಂದು ತಂಡ ನಿಯಂತ್ರಣಾ ಕ್ರಮಗಳ ಬಗ್ಗೆ ಸಲಹೆ ಪಡೆಯಿರಿ. ಶಿಕ್ಷಕರು ಮೇಲೆ ಚರ್ಚಿಸಿದ ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿ, ಅಗತ್ಯ ಅಂಶಗಳನ್ನು |

| | | | |
|---|---|---|---|
| | | <br>2.5 ಡಮ್ ಷರಾಟ್ಸ್. ( ಉದಾ:- ನಾನು ಪ್ರವಾಹವಾದರೆ)<br>2.6 ಕಲಿಕಾ ನಿಲ್ದಾಣ ಚಟುವಟಿಕೆ.<br>2.7 ಆಲ್ಬಂ ತಯಾರಿಕೆ.<br>2.8 ಚಿತ್ರ ನೋಡಿ ಹೆಸರಿಸಿ. (ನೈಸರ್ಗಿಕ ವಿಕೋಪಗಳು).<br>2.9 ನಾಟಕ:- ಪ್ರಕೃತಿ ವಿಕೋಪಗಳ ಮುನ್ನೆಚ್ಚರಿಕಾ ಕ್ರಮಗಳ ಕುರಿತು. | ಸೇರಿಸಿಕೊಂಡು ಕಲಿಕಾಫಲದೊಂದಿಗೆ ಸಮನ್ವಯೀಕರಿಸಿ.<br>2.6 **<u>ಕಲಿಕಾ ನಿಲ್ದಾಣ ಚಟುವಟಿಕೆ:-</u>**ಪ್ರತಿ ಪ್ರಾಕೃತಿಕ ವಿಕೋಪಗಳಿಗೆ ಸಂಬಂಧಿಸಿದಂತೆ ಕಾರಣ, ಪರಿಣಾಮ ಮತ್ತು ಪರಿಹಾರೋಪಾಯಗಳ ಬಗ್ಗೆ ಕಲಿಕಾ ಕಾರ್ಡುಗಳನ್ನು ರಚಿಸಿ ಅವುಗಳನ್ನು ಪ್ರತ್ಯೇಕ ಸ್ಥಳಗಳಲ್ಲಿ (ನಿಲ್ದಾಣ)ಇರಿಸಿರಿ. ಪ್ರತಿ ನಿಲ್ದಾಣಗಳಿಗೆ ಪ್ರತಿ ವಿದ್ಯಾರ್ಥಿಗಳ ತಂಡ ತೆರಳಿ ಅಲ್ಲಿರುವ ಕಲಿಕಾ ಕಾರ್ಡುಗಳನ್ನು ಓದಿ ಕೀ ಪದಗಳನ್ನು ನೋಟ್ ಮಾಡಿ ವಿಚಾರಮಂಡನೆಯ ಹಂತದಲ್ಲಿ ತಂಡದಿಂದ ಹೇಳಿಸಿ, ಬಿಟ್ಟು ಹೋದ ಅಂಶಗಳನ್ನು ಬೇರೆ ತಂಡದಿಂದ ಮನನ ಮಾಡಿಸಿ. |
| 3.ಸಂವಿಧಾನದಲ್ಲಿ ಮೂಲಭೂತ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ತಿಳಿಯುವರು.<br>**( ಒಟ್ಟು ದಿನಗಳು-2)** | * ಶೈಕ್ಷಣಿಕ ಸಮಾನತೆಯ ಅವಕಾಶಗಳು. (ವಿಧಿ 21 ಎ,24, 29, 30)<br>* ಸಾಮಾಜಿಕ ಸಮಾನತೆ. (ವಿಧಿ 14, 16(4), 17) | 3.1 ರಸಪ್ರಶ್ನೆ.<br>3.2 ಚಾರ್ಟ್ ರಚನೆ:- (ಹಕ್ಕು ಮತ್ತು ಕರ್ತವ್ಯಗಳ ಕುರಿತು)<br>3.3 ನಾಟಕಾಭಿನಯ. (ಬಾಲಕಾರ್ಮಿಕ ಪದ್ಧತಿ)<br>3.4ಪದಬಂಧ.<br>3.5 ಜಾಥಾ ಮತ್ತು | **<u>3.1 ರಸಪ್ರಶ್ನೆ</u>**:- ಎರಡು ದಿನಗಳ ಮುಂಚೆ ಕಲಿಕಾಂಶಕ್ಕೆ ಒಂದರಂತೆ ಮೂರು ತಂಡಗಳನ್ನು ರಚಿಸಿರಿ. ಒಂದು ತಂಡದಲ್ಲಿ ಕನಿಷ್ಠ ಮೂರು ವಿದ್ಯಾರ್ಥಿಗಳಿರಬೇಕು. ರಸಪ್ರಶ್ನೆಯ ಎಲ್ಲಾ ಹಂತಗಳನ್ನು ವಿದ್ಯಾರ್ಥಿಗಳೇ ನಿರ್ವಹಿಸಬೇಕು.( ಪ್ರಶ್ನೆ ರಚನೆ, ನಿರೂಪಣೆ, ಅಂಕಗಳ ವಹಿ ಇತ್ಯಾದಿ) ಕಲಿಕಾಂಶಕ್ಕೆ ಸಂಬಂಧಿಸಿದಂತೆ ಆಯಾ ತಂಡಗಳೇ ಪ್ರಶ್ನೆಗಳನ್ನು |

| | | | |
|---|---|---|---|
| | * ಶೈಕ್ಷಣಿಕ ಕರ್ತವ್ಯಗಳು.<br>(ವಿಧಿ-51 ಎ) | ಮನೆ ಭೇಟಿ.<br>3.6 ಮಕ್ಕಳ ಹರಟೆ ಕಟ್ಟೆ.<br>(ಜಗಲಿ ಕಟ್ಟೆ)<br>3.7 ಟ್ರೆಶರ್ ಹಂಟ್.<br>3.8 ಕೋಷ್ಟಕ ರಚನೆ.<br><br><br>3.9 ಮೈಂಡ್ ಮ್ಯಾಪ್ ರಚನೆ. | ರಚಿಸಿಕೊಂಡು ಬರುವಂತೆ ಪ್ರೇರಿಪಿಸಿ.(ಆಕರ 9ನೇ ತರಗತಿ ಸಂವಿಧಾನ ಪಾಠ) ಮುಂಚಿತವಾಗಿಯೇ ಶಿಕ್ಷಕರ ಅನುಮತಿ ಪಡೆದು ಪ್ರಶ್ನೆಗಳನ್ನು ಸರಿಪಡಿಸಿಕೊಂಡು ವಿಭಿನ್ನ ಹಂತಗಳ ಅನುಸಾರವಾಗಿ ನಡೆಸುವಂತೆ ಸಲಹೆ ನೀಡಿ. ( ಮಕ್ಕಳ ಕ್ರಿಯಾಶೀಲತೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿರಿ.) ಕೊನೆಯದಾಗಿ ಸರಿಯಾದ ಅಂಶಗಳನ್ನು ಪ್ರಶಂಶಿಸಿ ಬದಲಾವಣೆ ಮಾಡಿಕೊಳ್ಳಬೇಕಾದ ಅಂಶಗಳನ್ನು ತಿಳಿಸಿ.<br>**3.9 ಮೈಂಡ್ ಮ್ಯಾಪ್ ರಚನೆ:-** ಸಂವಿಧಾನದಲ್ಲಿ ತಿಳಿಸಿರುವ ಮೂಲಭೂತ ಹಕ್ಕುಗಳ ಕುರಿತು ಮೈಂಡ್ ಮ್ಯಾಪ್ ರಚಿಸಲು ಮಕ್ಕಳಿಗೆ ತಿಳಿಸಿರಿ.<br><br>ಉದಾ:- |
| 4. ಭಾರತೀಯ ಸಾಮಾಜಿಕ ಜಾಗೃತಿಗೆ ಮತ್ತು ಸಾಮಾಜಿಕ ಸುಧಾರಣೆಗೆ ಕಾರಣವಾದ ಅಂಶಗಳನ್ನು | * ಭಾರತೀಯ ಸಮಾಜ ಸುಧಾರಕರ ಬಗ್ಗೆ ತಿಳಿಯುವರು.<br>* ಬಸವೇಶ್ವರು, | 4.1 ಆಶು ಭಾಷಣ ಸ್ಪರ್ಧೆ.<br>4.2 ಆಶು ಅಭಿನಯ.<br>4.3 ವಿಚಾರ | **4.1 ಆಶುಭಾಷಣ ಸ್ಪರ್ಧೆ:-**ಶಿಕ್ಷಕರು ಭಾರತದ ಸಮಾಜ ಸುಧಾರಕರನ್ನು ಪಟ್ಟಿಮಾಡಿ, ಅವರ ಹೆಸರುಗಳನ್ನು ಪ್ರತ್ಯೇಕ ಚೀಟಿಯಲ್ಲಿ ಬರೆದು ಒಂದು ಡಬ್ಬದಲ್ಲಿ ಹಾಕಿ ಮಕ್ಕಳಿಂದ |

<table>
<tr>
<td>ವಿಶ್ಲೇಷಿಸುವರು.<br><br>( ಒಟ್ಟು ದಿನಗಳು -3)</td>
<td>ರಾಮಾನುಜಾಚಾರ್ಯರ ಬಗ್ಗೆ ತಿಳಿಯುವರು.<br><br>* ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದರ ಬಗ್ಗೆ ತಿಳಿಯುವರು.</td>
<td>ಸಂಕೀರಣ.<br><br>4.4 ವಿಷಯ ಮಂಡನೆ.<br><br>4.5 ಪ್ರಬಂಧ ರಚನೆ.<br><br>4.6 ಮೈಂಡ್ ಮ್ಯಾಪ್ ತಯಾರಿಕೆ.<br><br>4.7 ಆಲ್ಬಂ ತಯಾರಿಕೆ.<br><br><br>4.8 ಲಾವಣಿ ಹಾಡುವುದು.<br><br>4.9 ಆತ್ಮ ಕಥನ.<br><br>4.10 ಡಮ್ ಷರಾಟ್ಸ್.<br>( ಉದಾ:- ನಾನು ಬಸವಣ್ಣನಾದರೆ?)<br><br>4.11 ಟ್ರೆಷರಿ ಹಂಟ್ ಚಟುವಟಿಕೆ.<br><br>4.12 ಪದ ಕೋಷ್ಟಕ ಚಟುವಟಿಕೆ.</td>
<td>ಮಾತನಾಡಿಸಿ.<br><br>4.12 <u>ಪದ ಕೋಷ್ಟಕ ಚಟುವಟಿಕೆ.</u>:- ಈ ಕೆಳಗೆ ತೋರಿಸಿರುವಂತೆ ಅಕ್ಷರಗಳ ಕೋಷ್ಠಕವನ್ನು ರಚಿಸಿ ಅದರಲ್ಲಿ ಅಡಗಿರುವ ಸಮಾಜ ಸುಧಾರಕರ ಹೆಸರನ್ನು ಗುರುತಿಸಿ ವಿವಿಧ ಬಣ್ಣಗಳನ್ನು ಮಕ್ಕಳಿಂದ ತುಂಬಿಸಿ.<br><br>
<table>
<tr><td>ಲೇ</td><td>ಸ</td><td>ತ್ರ</td><td>ವಿ</td><td>ಇ</td><td>ಸ</td><td>ಉ</td><td>ಗಾ</td><td>ರ</td><td>ಧಿ</td></tr>
<tr><td>ಜ</td><td>ಕ</td><td>ದ</td><td>ವೇ</td><td>ಟ್ರ</td><td>ಕ</td><td>ಯ</td><td>ಶ್ವ</td><td>ದ</td><td>ಪ</td></tr>
<tr><td>ಮ</td><td>ಡ</td><td>ಣೆ</td><td>ಕಾ</td><td>ರ</td><td>ಜ</td><td>ವೇ</td><td>ಪ</td><td>ಚ</td><td>ಲ</td></tr>
<tr><td>ಕ</td><td>ದ</td><td>ಯ</td><td>ನಂ</td><td>ದ</td><td>ಸ</td><td>ರ</td><td>ಸ್ವ</td><td>ತಿ</td><td>ಡ</td></tr>
<tr><td>ರ</td><td>ಳ</td><td>ಡ</td><td>ದ</td><td>ಬ</td><td>ಪ್ರ</td><td>ಆ</td><td>ಇ</td><td>ಜ</td><td>ಅ</td></tr>
<tr><td>ಬ</td><td>ಹ</td><td>ಜ</td><td>ಎ</td><td>ರು</td><td>ಜ</td><td></td><td>ಮ</td><td>ರಾ</td><td>ಕ</td></tr>
<tr><td>ಢಿ</td><td>ತ</td><td>ಪಂ</td><td>ಲ</td><td>ಲ</td><td>ಪ</td><td>ರ</td><td>ಲ</td><td>ರ</td><td>ಯ</td></tr>
</table>
</td>
</tr>
<tr>
<td>5.1857 ರ ದಂಗೆಗೆ ಕಾರಣಗಳು ಮತ್ತು ಭಾರತದ</td>
<td>*ದಂಗೆಗೆ ಕಾರಣಗಳನ್ನು</td>
<td>5.1 ನಾಟಕಾಭಿನಯ.<br><br>5.2 ಚರ್ಚಾಸ್ಪರ್ಧೆ.</td>
<td><u>5.1 ನಾಟಕಾಭಿನಯ:-</u>ಮಕ್ಕಳಿಂದ (ಅಥವಾ ಡ್ರಾಮಾ ಶಿಕ್ಷಕರಿದ್ದಲ್ಲಿ ಅವರ</td>
</tr>
</table>

| | | | |
|---|---|---|---|
| ರಾಷ್ಟ್ರೀಯ ಚಳುವಳಿಯ ಏಳಿಗೆಗಳಿಗೆ ಕಾರಣಗಳನ್ನು ವಿಶ್ಲೇಷಿಸುವರು.<br>**( ಒಟ್ಟು ದಿನಗಳು -3)** | ವಿಶ್ಲೇಷಿಸುವರು.<br>*ದಂಗೆಯ ವಿಫಲತೆಗೆ ಕಾರಣಗಳನ್ನು ಗುರುತಿಸುವರು.<br>* ದಂಗೆಯ ಪರಿಣಾಮಗಳನ್ನು ವಿಶ್ಲೇಷಿಸುವರು. | 5.3 ವಿಷಯ ಮಂಡನೆ.<br>5.4 ವಿಡಿಯೋ ತುಣುಕು ವೀಕ್ಷಣೆ.<br>5.5 ಏಕಪಾತ್ರ ಅಭಿನಯ. (ಉದಾ:- ಝಾನ್ಸಿ ರಾಣಿ ಲಕ್ಷ್ಮೀ ಬಾಯಿ)<br>5.6 ಫ್ಲಾಷ್ ಕಾರ್ಡ್.<br>5.7 ಮೈಮ್ ( ಮೂಕಾಭಿನಯ) | ನೆರವು ಪಡೆಯಬಹುದು) ಸಂಭಾಷಣೆಯನ್ನು ರಚಿಸಿ, ಪಾತ್ರಗಳನ್ನು ಸೃಜಿಸಿ, ವಿದ್ಯಾರ್ಥಿಗಳ ಆಸಕ್ತಿಗನುಸಾರ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳಲು ಅನುಕೂಲಿಸಿ. ಅಧ್ಯಾಯಯದ ಅಷ್ಟೂ ಕಲಿಕಾಂಶಗಳು ಒಳಗೊಳ್ಳುವಂತೆ ಸಮನ್ವಯೀಕರಿಸಿ.<br>**5.4:- ವಿಡಿಯೋ ತುಣುಕು ವೀಕ್ಷಣೆ :-**<br>ದೂರದರ್ಶನ ಚಾನಲ್ ನಲ್ಲಿ ಪ್ರಸಾರವಾಗಿರುವ **"ಭಾರತ್ ಏಕ್ ಕೋಜ್"** ಕಾರ್ಯಕ್ರಮದ ಅಡಿಯಲ್ಲಿ ಪ್ರಸಾರವಾದ ಬಹದ್ದೂರ್ ಷಾ ಜಾಫರ್ ಗೆ ಸಂಬಂಧಿಸಿದ ವಿಡಿಯೋ ತುಣುಕು ತೋರಿಸಿ, ಮಕ್ಕಳಿಂದಮುಖ್ಯಾಂಶಗಳನ್ನು ಮಾತನಾಡಿಸಿ, ಕಲಿಕಾ ಫಲದೊಂದಿಗೆ ಸಮನ್ವಯೀಕರಿಸಿ.<br>ವಿಡಿಯೋಗಾಗಿ ಈ ಯೂಟ್ಯೂಬ್ ವೀಡಿಯೋ ಲಿಂಕ್ ಬಳಸಿ.https://youtu.be/qYz6qtJwoY4 |
| 6. ಭಾರತದಲ್ಲಿ ಬ್ರಿಟೀಷರ ಏಳಿಗೆಗೆ ಕಾರಣವಾದ ಅಂಶಗಳನ್ನು ಮತ್ತು ವಿವಿಧ ನೀತಿಗಳನ್ನು ಪಟ್ಟಿಮಾಡುವರು.<br>**( ಒಟ್ಟು ದಿನಗಳು -3)** | * ಸಹಾಯಕ ಸೈನಿಕ ಪದ್ಧತಿಯನ್ನು ತಿಳಿಯುವರು.<br>* ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯನ್ನು ವಿಶ್ಲೇಷಿಸುವರು.<br>* ಬ್ರಿಟೀಷ್ ಶಿಕ್ಷಣ | 6.1 ಪಾತ್ರಾಭಿನಯ.<br>6.2 ಏಕಪಾತ್ರ ಅಭಿನಯ.<br>6.3 ಚರ್ಚಾ ಸ್ಪರ್ಧೆ:- ಮೆಕಾಲೆ ಶಿಕ್ಷಣ ವರದಿ.<br>6.4 ನಕ್ಷೆಯಲ್ಲಿ ಸ್ಥಳಗಳನ್ನು | **6.1 ಪಾತ್ರಾಭಿನಯ:-** ಮೂರು ಪಾತ್ರಗಳನ್ನು ಗುರುತಿಸಿಕೊಳ್ಳಿರಿ. (ಉದಾ:- ಲಾರ್ಡ್ ವೆಲ್ಲಸ್ಲಿ, ಡಾಲ್ ಹೌಸಿ, ಮೆಕಾಲೆ) ಈ ಪಾತ್ರಕ್ಕೆ ವಿದ್ಯಾರ್ಥಿಗಳನ್ನು ಸಂಭಾಷಣೆ ಸಹಿತ ಸಿದ್ಧಗೊಳಿಸಿ, ರಾಜಾಜ್ಞೆಯ ಮಾದರಿಯಲ್ಲಿ ಸಂಭಾಷಣೆ (ಹಸ್ತಪ್ರತಿ) ಮಂಡನೆಗೆ ಅನುವು ಮಾಡಿಕೊಡಿ. ಉಳಿದ |

| | | | |
|---|---|---|---|
| | ನೀತಿಯನ್ನು ವಿವರಿಸುವರು. | ಗುರುತಿಸುವುದು.<br>6.5 ಮಕ್ಕಳ ಹರಟೆ ಜಗಲಿ ಕಟ್ಟೆ.<br>6.6 ಹೋಮ್ ಗ್ರೂಪ್ ಮತ್ತು ಎಕ್ಸ್‌ಪರ್ಟ್ ಗ್ರೂಪ್ ಮಾದರಿ ಚಟುವಟಿಕೆ. | ವಿದ್ಯಾರ್ಥಿಗಳು ಅದನ್ನು ಆಲಿಸುವಂತೆ ಸೂಚನೆ ನೀಡಿ,ಮಕ್ಕಳಿಂದ ಹಿಮ್ಮಾಹಿತಿ ಪಡೆಯಿರಿ.<br>6.6 **<u>ಹೋಮ್ ಗ್ರೂಪ್ ಮತ್ತು ಎಕ್ಸ್‌ಪರ್ಟ್ ಗ್ರೂಪ್ ಮಾದರಿ ಚಟುವಟಿಕೆ.:-</u>** ಇಲ್ಲಿ ವಿದ್ಯಾರ್ಥಿಗಳ ಎರಡು ಗುಂಪನ್ನು ರಚಿಸಿರಿ. ಹೋಮ್ ಗ್ರೂಪ್ ನ ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗಳಿಗೆ ಎಕ್ಸ್ ಪರ್ಟ್ ಗ್ರೂಪ್ ನ ವಿದ್ಯಾರ್ಥಿಗಳು ಉತ್ತರಿಸಲು ಹೇಳಿ. (ಶಿಕ್ಷಕರು ಸಹ ಎಕ್ಸ್‌ಪರ್ಟ್ ಗ್ರೂಪ್ ನಲ್ಲಿ ಇರುವುದು)<br>**<u>6.3 ಸೆಮಿನಾರ್ :- ಮೆಕಾಲೆ ಶಿಕ್ಷಣ ವರದಿ:-</u>** ವಿದ್ಯಾರ್ಥಿಗಳಿಂದ ಮೆಕಾಲೆಯ ಐತಿಹಾಸಿಕ ಪತ್ರವನ್ನು ಓದಿಸಿ ಅದರ ಕುರಿತು ಚರ್ಚೆಯನ್ನು ಏರ್ಪಡಿಸಿ. ಮಾಹಿತಿ ಕ್ರೋಢೀಕರಿಸಿ ಕಲಿಕಾಫಲದೊಂದಿಗೆ ಸಮನ್ವಯೀಕರಿಸಿ.<br><br> |
| 7. ಗ್ರಾಹಕ ಶಿಕ್ಷಣದ ಜಾಗೃತಿ ಮೂಡಿಸುವುದು.<br>**( ಮೂಲಭೂತ ಕಲಿಕಾ ಫಲ)**<br>**( ಒಟ್ಟು ದಿನಗಳು -2)** | * ವಸ್ತುವಿನ ಕಲಬೆರೆಕೆ<br>* ಬೆಲೆಯಲ್ಲಿ ಮೋಸ | 7.1ಚಿತ್ರ ನೋಡಿ ಘಟನೆ ವಿವರಿಸುವುದು.<br>7.2 ಭಿತ್ತಿ ಚಿತ್ರ. | **<u>7.4 ವಸ್ತು ಪ್ರದರ್ಶಿಸಿ ಮಾಹಿತಿ ಪಡೆಯುವುದು</u>**:- ವಿದ್ಯಾರ್ಥಿಗಳು ಮನೆಯ ಬಳಕೆಗಾಗಿ ಅಂಗಡಿಯಿಂದ ತಂದ ಯಾವುದಾದರೂ ವಸ್ತುವಿನ |

| | | | |
|---|---|---|---|
| | * ತೂಕದಲ್ಲಿ ವ್ಯತ್ಯಾಸ<br>* ಗ್ರಾಹಕ ಶಿಕ್ಷಣದ ಮಹತ್ವ. | **(ಜಾಗೋ ಗ್ರಾಹಕ್ ಘೋಷವಾಕ್ಯ)**<br>7.3 ಚರ್ಚೆ:- ( ಉದಾ:-**ವಸ್ತುವಿನ ಖರೀದಿಯಲ್ಲಿ ಮೋಸವಾದರೆ ನೀವೇನು ಮಾಡುವಿರಿ)**<br>7.4 ವಸ್ತು ಪ್ರದರ್ಶಿಸಿ ಮಾಹಿತಿ ಪಡೆಯುವುದು<br>7.5 ಜಾಹೀರಾತು ಪ್ರದರ್ಶನ<br>7.6 ನಾಟಕಾಭಿನಯ<br>7.7 ಸ್ಥಳ ಭೇಟಿ:- (ಜಿಲ್ಲಾ ಗ್ರಾಹಕರ ವೇದಿಕೆ ಭೇಟಿ)<br>7.8 ಮುಖ್ಯ ಗ್ರಾಹಕರ ವ್ಯಾಜ್ಯಗಳ ಪರಿಚಯ. | ಹೊದಿಕೆ(ರ್ಯಾಪರ್) ಶಾಲೆಗೆ ತರುವಂತೆ ಹೇಳಿ ಅದರ ಪೊಟ್ಟಣದ ಮೇಲೆ ಇರುವ ಮಾಹಿತಿಯನ್ನು ( ಉದಾ:- ಉತ್ಪಾದನೆಯಾದ ಸಂಸ್ಥೆಯ ಹೆಸರು, ಗರಿಷ್ಠ ಬೆಲೆ, ತಯಾರಿಸಿದ ದಿನಾಂಕ, ಅವಧಿ ಮುಕ್ತಾಯದ ದಿನಾಂಕ, ಗುಣಮಟ್ಟದ ಚಿಹ್ನೆ ಹಾಗೂ ತೂಕ ಇತ್ಯಾದಿ). ಮಕ್ಕಳಿಂದ ಹೇಳಿಸಿ. |
| 8.ಆರೋಗ್ಯ, ನೈರ್ಮಲ್ಯ ಇತರ ಸಾರ್ವಜನಿಕ ಸೌಲಭ್ಯಗಳ ನಿರ್ವಹಣೆಯಲ್ಲಿ ಸ್ಥಳೀಯ ಸರ್ಕಾರದ ಪಾತ್ರ ತಿಳಿಯುವರು. | *ಗ್ರಾಮೀಣ ಸ್ಥಳೀಯ ಸರ್ಕಾರ<br>*ಗ್ರಾಮ ಪಂಚಾಯ್ತಿ ರಚನೆ<br>*ಗ್ರಾಮ ಪಂಚಾಯ್ತಿ ಕಾರ್ಯ ಮತ್ತು | 8.1 ಗ್ರಾಮ ಭೇಟಿ ಮತ್ತು ಮಾಹಿತಿ ಸಂಗ್ರಹ. ( **ಸೌಲಭ್ಯಗಳು ಏನಿದೆ-ಏನಿಲ್ಲ ಎಂಬ ಮಾಹಿತಿ)** | **8.1ಗ್ರಾಮ/ವಾರ್ಡ್ ಭೇಟಿ - ಮಾಹಿತಿ ಸಂಗ್ರಹ:-**ನಿಮ್ಮ ಊರಿನಲ್ಲಿ ಆರೋಗ್ಯ ನೈರ್ಮಲ್ಯ & ಸೌಲಭ್ಯಗಳ ಸುಧಾರಣೆಗೆ ಪಂಚಾಯ್ತಿಯಿಂದ ಆಗಿರುವ ಕೆಲಸಗಳು ಮತ್ತು ಆಗಬೇಕಾಗಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿಕೊಂಡು |

| | | | |
|---|---|---|---|
| **( ಒಟ್ಟು ದಿನಗಳು -3)** | ಮಹತ್ವ | 8.2 ಮಕ್ಕಳ ಜಗಲಿಕಟ್ಟೆ ಹರಟೆ.<br>8.3 ಅಣಕು ಗ್ರಾಮ ಸಭೆ.<br>8.4 ಟ್ರೆಶರ್ ಹಂಟ್.<br>8.5 ಮಕ್ಕಳ ಗ್ರಾಮಸಭೆ ಆಯೋಜನೆ.<br>8.6 ಗ್ರಾಮ ಪಂಚಾಯ್ತಿ ಭೇಟಿ.<br>8.7 ಮೈಂಡ್ ಮ್ಯಾಪ್ ರಚನೆ.<br>8.8 ಕೊಲಾಜ್.<br>(ಸೌಲಭ್ಯ ವಂಚಿತ ಮತ್ತು ಮಾದರಿ ಗ್ರಾಮ ಪಂಚಾಯ್ತಿ)<br><br><br><br>8.9 ಆಶುಭಾಷಣ:- (ಉದಾ:- **ನಾನು ಗ್ರಾಮಪಂಚಾಯ್ತಿ ಆಧ್ಯಕ್ಷನಾದರೆ)**<br>8.10: ಗ್ರಾಮ ಪಂಚಾಯ್ತಿ ಅಧ್ಯಕ್ಷರ ಸಂದರ್ಶನ. | ತರಗತಿಯಲ್ಲಿ ಮಂಡಿಸಲು ತಿಳಿಸಿ.<br>**<u>8.4 ಟ್ರೆಶರ್ ಹಂಟ್</u>** :- ಗ್ರಾಮ ಪಂಚಾಯ್ತಿಯ ಸೌಲಭ್ಯಗಳ ಮಿಂಚುಪಟ್ಟಿಯನ್ನು ತಯಾರಿಸಿ ಅವುಗಳನ್ನು ಬಚ್ಚಿಟ್ಟ ಬಗ್ಗೆ ಕಪ್ಪು ಹಲಗೆಯ ಮೇಲೆ ನಕ್ಷೆಯ ಮೂಲಕ ತಿಳಿಸಿರಿ. ವಿದ್ಯಾರ್ಥಿಗಳ ತಂಡಗಳು ಆಯಾ ಸ್ಥಳಕ್ಕೆ ಹೋಗಿ ವಿಷಯ ಸಂಗ್ರಹಿಸಿ ಚಿಕ್ಕದಾಗಿ ನೋಟ್ ಮಾಡಿಕೊಂಡು ಎಲ್ಲಾ ತಂಡಗಳನ್ನು ಸೇರಿಸಿ ಮಂಡನೆ ಮಾಡಿಸಿ.<br><br>8.7 **<u>ಮೈಂಡ್ ಮ್ಯಾಪ್ ರಚಿಸೋಣ:-</u>** ಪೂರ್ವಜ್ಞಾನದಿಂದ ಗ್ರಾಮ ಹಾಗೂ ಗ್ರಾಮಪಂಚಾಯ್ತಿಯ ಬಗ್ಗೆ ವಿದ್ಯಾರ್ಥಿಗಳಿಂದ ಮಾತನಾಡಿಸಿ, ಮಾಹಿತಿಗಳನ್ನು ಕಪ್ಪುಹಲಗೆಯ ಮೇಲೆ ವಿಂಗಡಿಸಿ ಮೈಂಡ್ ಮ್ಯಾಪ್ ರಚಿಸಿ. |

| | | | |
|---|---|---|---|
| 9. ಸಾಮಾಜಿಕ ಸಮಸ್ಯೆಗಳು ಮತ್ತುಪರಿಹಾರೋಪಾಯಗಳನ್ನು ತಿಳಿಯುವರು.<br>**( ಒಟ್ಟು ದಿನಗಳು -3)** | * ಲಿಂಗ ತಾರತಮ್ಯ.<br>* ಬಾಲ ಕಾರ್ಮಿಕ ಪದ್ಧತಿ<br>* ಅಸ್ಪೃಶ್ಯತೆ, ಹೆಣ್ಣು ಭ್ರೂಣ ಹತ್ಯೆ, ಲೈಂಗಿಕ ದೌರ್ಜನ್ಯ. | 9.1 ಪತ್ರಿಕೆಗಳ ಪ್ರಚಲಿತ ಮಾಹಿತಿ ಸಂಗ್ರಹ.<br>9.2 ಬಾಲ ಕಾರ್ಮಿಕರ ಸಮೀಕ್ಷೆ ಮತ್ತು ಮಾಹಿತಿ ಸಂಗ್ರಹ.<br>9.3 ರಸಪ್ರಶ್ನೆ<br>9.4 ಚಿತ್ರ ನೋಡಿ ಘಟನೆ ವಿವರಿಸುವುದು<br>9.5 ಭಾಷಣ ಸ್ಪರ್ಧೆ.<br>9.6 ನಾಟಕಾಭಿನಯ.<br>9.7 ಸಂದರ್ಶನ.<br>9.8 ಲಾವಣಿ.<br>9.9 ಕಲಿಕಾ ನಿರ್ಮಾಣ ಮಾದರಿ. | **9.2 ಬಾಲ ಕಾರ್ಮಿಕರ ಸಮೀಕ್ಷೆ ಮತ್ತು ಮಾಹಿತಿ ಸಂಗ್ರಹ:-** ವಿದ್ಯಾರ್ಥಿ ವಾಸವಿರುವ ಪ್ರದೇಶದಲ್ಲಿ ಶಾಲೆಯಿಂದ ಹೊರಗುಳಿದಿದ್ದಲ್ಲಿ,ಬಾಲಕಾರ್ಮಿಕರಾಗಿ ದುಡಿಯುತ್ತಿರುವ ಮಕ್ಕಳ ಸಮೀಕ್ಷೆ ಮಾಡಿ ಮಾಹಿತಿ ಸಂಗ್ರಹಿಸುವಂತೆ ತಿಳಿಸಿರಿ. |
| 10.ರಾಷ್ಟ್ರೀಯ ಆದಾಯ ಮತ್ತು ಭಾರತದ ಅರ್ಥವ್ಯವಸ್ಥೆಯ ವಿವಿಧ ವಲಯಗಳನ್ನು ತಿಳಿಯುವರು.<br>**( ಒಟ್ಟು ದಿನಗಳು -3)** | * ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯದ ಪರಿಕಲ್ಪನೆ.<br>* ಪ್ರಾಥಮಿಕ ವಲಯ.<br>* ದ್ವಿತೀಯ ವಲಯ.<br>* ತೃತೀಯ ವಲಯಗಳು. | 10.1 ರೈತರೊಬ್ಬರ ಸಂದರ್ಶನ.<br>10.2 ನಿಮ್ಮ ವಲಯದ ಜನರ ವಿವಿಧ ಉದ್ಯೋಗಗಳ ಪಟ್ಟಿ ಮತ್ತು ವರ್ಗೀಕರಣ.<br>10.3 ಪ್ರಬಂಧ ರಚನೆ:-<br>**( ಕೃಷಿ ಭಾರತದ** | **10.1 ರೈತರೊಬ್ಬರ ಸಂದರ್ಶನ:-** ಮಕ್ಕಳಿಗೆ, ನಿಮ್ಮ ಊರಿನ ಕೃಷಿಕರೊಬ್ಬರನ್ನು ಸಂದರ್ಶಿಸಿ ಅವರಿಂದ ಬೆಳೆಯುತ್ತಿರುವ ಬೆಳೆ, ಅನುಸರಿಸುತ್ತಿರುವ ಕೃಷಿ ವಿಧಾನ, ಅನುಭವಗಳ ಮಾಹಿತಿ ಸಂಗ್ರಹಿಸಲು ತಿಳಿಸಿರಿ. |

| | | | |
|---|---|---|---|
| | | **ಅರ್ಥವ್ಯವಸ್ಥೆಯ ಬೆನ್ನೆಲುಬು)**<br>10.4 ವಿದ್ಯಾರ್ಥಿ ಸಂಸತ್ತು ಸಭೆ ನಡೆಸಿ ಕೃಷಿ ಸಮಸ್ಯೆ ಮತ್ತು ಪರಿಹಾರ ಕುರಿತು ಸಮಗ್ರ ಚರ್ಚೆ.<br>10.5 ಆಲ್ಬಂ ತಯಾರಿಕೆ.( ವಿವಿಧ ವೃತ್ತಿಗಳು).<br>10.6 ಪತ್ರಿಕೆಯಲ್ಲಿ ಬರುವ ವ್ಯಾಪಾರ, ವಾಣಿಜ್ಯ ಪುರವಣಿಯಲ್ಲಿ ಬರುವ ವಿಷಯಗಳ ಬಗ್ಗೆ ಹರಟೆ. | |